**ಪತ್ರಿಕಾ ಪ್ರಕಟಣೆ**

# ಸುಪ್ರೀಂಕೋರ್ಟ್ ನಲ್ಲಿ ನಾಗರೀಕರು vs ರಾಜ್ಯ ಸರ್ಕಾರದ ಹೋರಾಟ

## ಸರ್ವೋಚ್ಚ ನ್ಯಾಯಾಲಯದಲ್ಲಿ ಬೆಳ್ಳಂದೂರು-ಅಗರ ಕೆರೆಯ "ಎನ್.ಜಿ.ಟಿ ಬಫರ್ ವಲಯ ತೀರ್ಪಿನ" ಮೇಲೆ ದಿನಾಂಕ-08-01-2019ರಂದು ಅಂತಿಮ ವಿಚಾರಣೆ

**ಬೆಂಗಳೂರಿನ ಕೆರೆಗಳು ಮತ್ತು ಜಲಮೂಲಗಳನ್ನು ಉಳಿಸುವ ಈ ನಿರ್ಣಾಯಕ ಹೋರಾಟದಲ್ಲಿ ನಮ್ಮ ಬೆಂಗಳೂರು ಪ್ರತಿಷ್ಠಾನ ಪ್ರಮುಖ ಪಾತ್ರ ವಹಿಸಿದೆ.**

**ಬೆಂಗಳೂರು, ಜನವರಿ 6, 2019:** ಬೆಂಗಳೂರಿನ ಕೆರೆಗಳು ಮತ್ತು ಜಲಮೂಲಗಳನ್ನು ರಕ್ಷಿಸುವ ಹೋರಾಟದಲ್ಲಿ ನಮ್ಮ ಬೆಂಗಳೂರು ಪ್ರತಿಷ್ಠಾನ ಮುಂಚೂಣಿಯಲ್ಲಿದೆ. ತನ್ನ ಹೋರಾಟದಲ್ಲಿ ಎನ್ ಬಿಎಫ್ ಅಪಾರ ಜನ ಬೆಂಬಲಗಳಿಸಿದೆ ಮತ್ತು ಈ ಬೆಂಬಲದಿಂದಾಗಿ ಹಲವಾರು ಬಾರಿ ಹೋರಾಟವನ್ನು ಸುಪ್ರೀಂಕೋರ್ಟ್ ಮತ್ತು ಹಸಿರು ಪೀಠಕ್ಕೆ ಕೊಂಡೊಯ್ಯಲು ಸಾಧ್ಯವಾಗಿದೆ.

ಸುಪ್ರೀಂಕೋರ್ಟ್ ಜನವರಿ 8 2019ರಂದು ಅಂತಿಮ ವಿಚಾರಣೆ ನಡೆಸಲು ದಿನಾಂಕ ನಿಗದಿಪಡಿಸಿದೆ. ನಿಮಗೆಲ್ಲಾ ತಿಳಿದಿರುವಂತೆ ನ್ಯಾಯಾಂಗ ಹೋರಾಟ ಬಹಳ ದುಬಾರಿಯ ಮಾರ್ಗ. ನಮ್ಮನ್ನು ಪ್ರತಿನಿಧಿಸುತ್ತಿರುವ ವಕೀಲರಲ್ಲಿ ನಗರವನ್ನು ಉಳಿಸಲು ಮತ್ತು ರಕ್ಷಿಸಲು ಇರುವ ಬದ್ಧತೆ ಬಗೆ ನಮಗೆ ಸಂಪೂರ್ಣ ವಿಶ್ವಾಸವಿದೆ. ಆದರೆ, ರಾಜ್ಯ ಸರ್ಕಾರ ಜನಪರವಾದ ಹಸಿರು ಪೀಠದ ಆದೇಶಕ್ಕೆ ತಡೆಯೊಡ್ಡಲು ದುಬಾರಿ ಮತ್ತು ಪ್ರಭಾವಿ ವಕೀಲರ ದಂಡನ್ನೇ ನೇಮಿಸಲು ಹೊರಟಿದೆ.

ಮೇ 4, 2016 ರಂದು ಕೆರೆಗಳಿಗೆ ಅನ್ವಯಿಸುವಂತೆ 75 ಮೀ ಬಫರ್ ವಲಯ, ಪ್ರಾಥಮಿಕ, ದ್ವಿತೀಯ ಮತ್ತು ಬೃಹತ್ ರಾಜಕಲುವೆಗಳಿಗೆ ಕ್ರಮವಾಗಿ 50, 35 ಮತ್ತು 25 ಮೀಟರ್ ಗಳ ಬಫರ್ ವಲಯವನ್ನು ಮೀಸಲಿಡುವಂತೆ ನಿಗದಿಪಡಿಸಿ ಮಾನ್ಯ ಹಸಿರು ಪೀಠ ಆದೇಶ ಹೊರಡಿಸಿತ್ತು. ಸುಸ್ಥಿರ ಅಭಿವೃದ್ಧಿಗೆ ಈ ಬಫರ್ ವಲಯ ಅತ್ಯವಶ್ಯವೆಂದು ಮತ್ತು ಈ ವಲಯದಲ್ಲಿ ಯಾವುದೇ ರೀತಿಯ ನಿರ್ಮಾಣಕ್ಕೆ ಅವಕಾಶ ನೀಡದಂತೆ ಕಟ್ಟುನಿಟ್ಟಿನ ಆದೇಶ ನೀಡಿತ್ತು.

ಆದರೆ, ಮಂತ್ರಿ ಟೆಕ್ ಜೋನ್, ಕೋರ್ ಮೈಂಡ್ ಸಾಫ್ಟ್ ವೇರ್ ಸರ್ವೀಸಸ್ ಮತ್ತು ರಾಜ್ಯ ಸರ್ಕಾರ ತಮ್ಮ ಪಟ್ಟಭದ್ರ ಹಿತಾಸಕ್ತಿಗಳ ರಕ್ಷಣೆಗಾಗಿ ಹಸಿರು ಪೀಠದ ಆದೇಶಕ್ಕೆ ತಡೆಯೊಡ್ಡಲು ಸುಪ್ರೀಂಕೋರ್ಟ್ ಮೊರೆಹೋಗಿದ್ದಾರೆ.

**ಬಿಲ್ಡರ್ ಗಳ ಲಾಬಿ ಬೆಂಬಲಕ್ಕೆ ಈ ಕೆಳಗಿನ ದುಬಾರಿ ಮತ್ತು ಪ್ರಭಾವಿ ವಕೀಲರ ದಂಡನ್ನು ನೇಮಿಸಲಾಗಿದೆ**
ಕೋರ್ ಮೈಂಡ್ ಸಾಫ್ಟ್ ವೇರ್ - ಕಪಿಲ್ ಸಿಬಲ್, ಹಿರಿಯ ವಕೀಲರು, ಮಂತ್ರಿ ಟೆಕ್ ಝೋನ್ - ಗೋಪಾಲ್ ಸುಬ್ರಮಣಿಯನ್, ಹಿರಿಯ ವಕೀಲರರು; ದುಷ್ಯಂತ್ ದಾವೆ, ಹಿರಿಯ ವಕೀಲರು; ನೀರಜ್ ಕಿಶನ್ ಕೌಲ್, ಹಿರಿಯ ವಕೀಲರು; ಆರ್. ವೆಂಕಟ್ರಮಣಿ, ಹಿರಿಯ ವಕೀಲರು.

ರಾಜ್ಯ ಸರ್ಕಾರ, ಪ್ರಾಧಿಕಾರಗಳು ಮತ್ತು ಇತರೆ ಬಿಲ್ಡರ್ ಗಳು - ಉದಯ್ ಹೊಳ್ಳ, ಅಡ್ವೊಕೇಟ್ ಜನರಲ್, ಕರ್ನಾಟಕ; ಬಸವ ಪ್ರಭು ಪಾಟೀಲ್, ಹಿರಿಯ ವಕೀಲರು; ಕಿರಣ್ ಸೂರಿ, ಹಿರಿಯ ವಕೀಲರು; ಶಶಿಕಿರಣ್ ಶೆಟ್ಟಿ, ಹಿರಿಯ ವಕೀಲರು.

**ಹೋರಾಟದ ಮುಂಚೂಣಿಯಲ್ಲಿ ನಮ್ಮ ಬೆಂಗಳೂರು ಪ್ರತಿಷ್ಠಾನ**

ನಮ್ಮ ಬೆಂಗಳೂರು ಪ್ರತಿಷ್ಠಾನ ತನ್ನ ಸ್ವಂತ ಹಣಕಾಸು ಸಂಪನ್ಮೂಲಗಳಿಂದ ಈ ಹೋರಾಟ ನಡೆಸುತ್ತಿದೆ. ರಾಜ್ಯ ಸರ್ಕಾರ ಸಾರ್ವಜನಿಕ ಹಣವನ್ನು ಜನಪರ ಅಭಿವೃದ್ಧಿ ಕೆಲಸಗಳಿಗೆ ಸದುಪಯೋಗ ಪಡಿಸುವುದು ಬಿಟ್ಟು ಬಿಲ್ಡರ್ ಗಳ ಜೊತೆ ಕೈಜೋಡಿಸಿ ಕೋಟ್ಯಂತರ ರೂಪಾಯಿಗಳ ಸಾರ್ವಜನಿಕ ಹಣವನ್ನು ದುಬಾರಿ ವಕೀಲರಿಗೆ ಸುರಿಯಲು ಹೊರಟಿದೆ.

ಇನ್ನೊಂದೆಡೆ, ಜನಪರ ಸಂಸ್ಥೆಗಳಾದ ನಮ್ಮ ಬೆಂಗಳೂರು ಪ್ರತಿಷ್ಠಾನ, ಫಾರ್ವರ್ಡ್ ಫೌಂಡೇಷನ್ ಬೆಂಗಳೂರನ್ನು ಉಳಿಸುವ ತಮ್ಮ ಬದ್ಧತೆಯಿಂದ ನಾಗರೀಕರು ಮತ್ತು ಪ್ರಬಲ ಬಿಲ್ಡರ್ ಗಳು/ ಸರ್ಕಾರದ ನಡುವೆ ನಡೆಯಿತ್ತಿರುವ ಈ ಅಸಮ ಹೋರಾಟದಲ್ಲಿ ಪ್ರಾಮಾಣಿಕವಾಗಿ ತನ್ನ ಜನಪರ ವಾದ ಮಂಡಿಸಲಿದೆ.

**ನಮ್ಮ ಬೆಂಗಳೂರು ಪ್ರತಿಷ್ಠಾನದ ಕುರಿತು:**

*ನಮ್ಮ ಬೆಂಗಳೂರು ಪ್ರತಿಷ್ಠಾನವು ಉತ್ತಮ ಬೆಂಗಳೂರಿಗೆ ವಕಾಲತ್ತು, ಪಾಲುದಾರಿಕೆ ಮತ್ತು ಸಕ್ರಿಯತೆಯ ತತ್ವಗಳ ಮೇಲೆ ಕಾರ್ಯನಿರ್ವಹಿಸುತ್ತದೆ. ನಗರದ ಯೋಜನೆ ಮತ್ತು ಆಡಳಿತದಲ್ಲಿ ನಾಗರಿಕರಿಗೆ ಭಾಗವಹಿಸಲು ವೇದಿಕೆಯಾಗಿ ಪ್ರತಿಷ್ಠಾನವು ಕಾರ್ಯನಿರ್ವಹಿಸುತ್ತದೆ. ಸಾರ್ವಜನಿಕ ಹಣ ಮತ್ತು ಸಾರ್ವಜನಿಕ ಆಸ್ತಿಗಳ ಬಳಕೆಯಲ್ಲಿ ಪಾರದರ್ಶಕತೆಯನ್ನು ಖಾತ್ರಿಪಡಿಸುವ ಮೂಲಕ ಪ್ರಾಧಿಕಾರಗಳ ಜವಾಬ್ದಾರಿಯ ಆಡಳಿತದಲ್ಲಿನ ಭ್ರಷ್ಟಾಚಾರದ ವಿರುದ್ಧ ನಾವು ಹೋರಾಡುತ್ತೇವೆ.*

***ಮಾಧ್ಯಮ ಸಂಪರ್ಕ:***
*ಪ್ರಿಯದರ್ಶಿನಿ ಎಸ್.ಕೆ*
*ಮೊ : + 91 9986377989*
*Email: priyadarshini.s@rajeev.in*